SATYAVADI Regd No M T

ಸತ್ಯವಾದಿ

(ಆರಮನೆ ಸಿದಸ್ವೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 29 ಸಂಚಿಕೆ 159 | ಗುರುವಾರ 28-2-46 | ಬಿಡಿ ಪ್ರತಿ 3 ಪೈ

'ಹಂಗರ್ ಪೋಸ್ಟಲ್' ಎಂಪ್ಲಾಯಿ'

ವೃತ್ತಾಂತ ಸಂಗ್ರಹ

ಜೊಹಸೆಲಂ ಫೆ 26— ನಿನ್ನೇ ರಾತ್ರಿ ಪ್ಯಾಲಿಸ್ಟೈನಿನಲ್ಲಿ ಯಹೂದಿ ದಂಗೆಕೋರರು 14 ಆರ್. ಎ. ಎಫ್ ವಿಮಾನಗಳನ್ನೂ, 3 ವಿಮಾನ ನಿಲ್ದಾಣಗಳನ್ನೂ ನಾಶಮಾಡಿದರು.

ಕೈರೊ ಫೆ 26— ಹಲವು ಸಹಸ್ರ ಮಂದಿ ವಿದ್ಯಾರ್ಥಿಗಳು ಸಭೆ ನಡೆಸಿ, ಬ್ರಿಸಾಮಾಜ್ಯಶಾಹಿಯ ಮೇಲೆ ಸಂಗ್ರಾಮ ಘೋಷಿಸಬೇಕೆಂದೂ, ಬ್ರಿಟಿಷ್ ವಸ್ತುಗಳಿಗೆ, ಇಂಗ್ಲೀಷು ಭಾಷೆಗೆ ಬಹಿಷ್ಕಾರ ಹಾಕಬೇಕೆಂದೂ ಠರಾವು ಮಾಡಿದರು.

ಬೆಂಗಳೂರು ಫೆ 26— ಇನ್ನು ಮೇಲೆ ಸಂಸ್ಥಾನದಿಂದ ಹೊರಕ್ಕೆ ಸರ್ಕಾರದ ಅಪ್ಪಣೆಯಿಲ್ಲದೆ ಯಾವ ಕಾಳನ್ನೂ ಕಳಿಸಕೂಡದೆಂದು ಆಜ್ಞೆಯಾಗಿದೆ.

ಮೈಸೂರು ಸರಕಾರದ ಪಬ್ಲಿಸಿಟಿ ಆಫೀಸರವರು ಒಂದು ಪೈಸೆ ನೋಟನ್ನು ಹೊರಡಿಸಿ, ಮೈ || ಕಾಂ || ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದ ವಿಷಯಗಳಲ್ಲಿ ಕೆಲವು ವೈತ್ಯಾಸಗಳಿರುವುದನ್ನು ವಿವರಿಸಿ ಸರ್ಕಾರದವರು ಚಿತ್ರದುರ್ಗದ || ಆಹಾರ ಪರಿಸ್ಥಿತಿಯನ್ನು ವಿಚಕ್ಷಣೆಯಿಂದ ನೋಡುತ್ತಿರುವರೆಂದು ಹೇಳಿರುವರು.

ಸ್ವೀನಿನಲ್ಲಿ 11 ಮಂದಿ ರಿಪಬ್ಲಿಕನರಿಗೆ ಮರಣ ದಂಡನೆ ವಿಧಿಸಿದ್ದರಿಂದ, ಫ್ರಾನ್ಸಿಸ್ಕೊವರು ಸ್ಪೇನ್ ಕಡೆಯ ತಮ್ಮ ಗಡಿಯನ್ನು ಬಂದು ನೂಡಿದ್ದಾರೆ.

ನ್ಯೂಯಾರ್ಕ್ ಫೆ 25— ರಷ್ಯಾವು ಟರ್ಕೀ ಮೇಲೆ ಆಕ್ರಮಣ ಕಾರ್ಯವನ್ನು ಏಪ್ರಿಲ್ ತಿಂಗಳಲ್ಲಿ ನಡೆಸುವುದೆಂದು ಡ್ರೂ ಪಿಯರ್ಸನರು ಆಕಾಶವಾಣಿ ಭಾಷಣದಲ್ಲಿ ಭವಿಷ್ಯ ನುಡಿದಿರುವರು.

'ಹಂಗರ್ ಪೋಸ್ಟ್‌ಮ್ಯಾನ್' ಎಂಪ್ಲಾಯಿ' ಎಂಬುದಾಗಿ ಭಾರತದ ಎಲ್ಲಾ ಅಂಚೆ ಮತ್ತು ತಂತಿ ನೌಕರರುಗಳು ಬ್ಯಾಡ್ಜುಗಳನ್ನು ಹಾಕಿಕೊಂಡಿರುವರು. ಬರುವ ತಿಂಗಳು ತಾರೀಖು 11 ರಿಂದ ಆರಂಭವಾಗಲಿರುವ ಅಂಚೆ ಮತ್ತು ತಂತಿ ನೌಕರರುಗಳ ಮಹಾ ಮುಷ್ಕರಕ್ಕೆ ಈ ಗಂಡಾಂತರ ಸೂಚನೆಯೆಂದು ತಿಳಿಯಬಂದಿದೆ. ಮೈಸೂರಿನಲ್ಲಿಯೂ ಅಂಚೆ ಮತ್ತು ತಂತಿ ನೌಕರರುಗಳು ಈ ಗಂಡಾಂತರವನ್ನು ತಮ್ಮ ತಮ್ಮ ಅಂಗಿಯ ಮೇಲೆ ಧರಿಸಿರುವರು.

ಕಲ್ಲಿಕೋಟಿ, ಫೆ 26 — ಕೊಬ್ಬರಿ ಎಣ್ಣೆ, ಕೊಬ್ಬರಿ ಮತ್ತು ತೆಂಗಿನ ಕಾಯಿ ಬೆಲೆ ಸ್ವಲ್ಪ ಇಳಿದಿದೆ.

ಬೊಂಬಾಯಿ, ಫೆ 27 — ನಾವಿಕ ಮುಷ್ಕರಕಾರರ ಪೈಕಿ 84 ಮಂದಿಯನ್ನು ಯಾವುದೋ ಗೊತ್ತಿಲ್ಲದ ಸ್ಥಳಕ್ಕೆ ಒಯ್ಯಲಾಗಿದೆ.

ಮದರಾಸು ಫೆ 27— ನಗರವು ಶಾಂತಿಯಿಂದಿದ್ದು ಕಾರ್ಯಕಲಾಪಗಳು ಎಂದಿನಂತೆ ನಡೆಯುತ್ತಿದೆ.

ನವದೆಹಲಿ, ಫೆ 26 — ಆಲ್ ಇಂಡಿಯಾ ಪೋಸ್ಟ್‌ಮೇನ್ ಮತ್ತು ಲೋವರ್‌ಗ್ರೇಡ್ ಸ್ಟಾಫ್ ಯೂನಿಯನ್‌ನಲ್ಲಿ ಒಂದು ಲಕ್ಷ ಮಂದಿ ಸದಸ್ಯರಿರುವರೆಂದೂ ಮಾರ್ಚಿ 5 ರೊಳಗೆ ಇವರ ಕೇಳಿಕೆಗಳು ವ್ಯವಸ್ಥೆಯಾಗದಿದ್ದಲ್ಲಿ ಮಾರ್ಚಿ 11 ರಿಂದ ಇವರು ಮುಷ್ಕರ ಹೂಡಿಯುವರೆಂದು ಜ || ಸೆಕ್ರಟರಿಯವರ ಹೇಳಿಕೆಯಾಗಿದೆ.

ಮಧ್ಯ ಭಾರತದ ಒಂದು ಕ್ಯಾಂಪಿನಿಂದ ಜಪಾನೀ ಖೈದಿಗಳು ಗಲಭೆ ಮಾಡಿ ತಪ್ಪಿಸಿಕೊಂಡುಹೋಗಲು ಪ್ರಯತ್ನಿಸಿದರೆಂದು ಹೇಳಲಾಗಿದೆ.

ನಾಯಿಯ ರಾಜ್ಯಭಾರ

ಅಬ್ಸೀನಿಯಾ ದೇಶಕ್ಕೆ ಮೂರು ಸಾವಿರ ವರ್ಷಗಳ ಹಿಂದೆ ನಾಯಿಯೇ ರಾಜನಾಗಿರುತ್ತಿತ್ತಂತೆ. ಪರಿಪಾಲನೆಗೆ ಸಂಬಂಧಪಟ್ಟ ಕಾಗದಗಳನ್ನೆಲ್ಲಾ ಆ ಶುನಕ ರಾಜರಿಗೆ ಓದಿ ಹೇಳಿದಾಗ ಅದು ಬಾಲವನ್ನು ಅಲ್ಲಾಡಿಸಿದಲ್ಲಿ ಮಂಜೂರು ಆಯಿತೆಂದೂ 'ಬೌ' ಎಂದು ಬೊಗಳಿದರೆ ಮಂಜೂರು ಆಗಲಿಲ್ಲವೆಂದೂ ನಿರ್ಣಯಿಸುತ್ತಿದ್ದರಂತೆ;

ಮೈಸೂರು

ಸಿನ್ನೆಯ ದಿವಸ ಮಧ್ಯಾಹ್ನ ಮೈಸೂರು ಜಿಲ್ಲಾಸಭೆಯ ಉಪಾಧ್ಯಕ್ಷರಾದ ಶ್ರೀ ಟಿ. ಸಿ. ಹೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಜಿಲ್ಲಾಸಭೆಯ ಅಧಿವೇಶನದಲ್ಲಿ ಪ್ರಭುಗಳಿಗೆ ಜಿ. ಸಿ ಬಿ. ಪ್ರಶಸ್ತಿ ದೊರೆತುದಕ್ಕಾಗಿಯೂ ಸಂಸ್ಥಾನದಲ್ಲಿ 35 ಲಕ್ಷ ರೂ ಗಳ ಕಂದಾಯವನ್ನು ಮಾಫುಮಾಡಿದುದಕ್ಕಾಗಿಯೂ ಅಭಿನಂದಿಸುವ ನಿರ್ಣಯಗಳಾದವು. ಜಿಲ್ಲಾಸಭೆಯು ಒರೆದ ಪತ್ರಕ್ಕೆ ಸರ್ಕಾರದ ಅಹಾರಾಧಿಕಾರಿಗಳು ಬೇಜವಾಬ್ದಾರಿಯುತವಾಗಿ ಉತ್ತರಕೊಟ್ಟಿರುವುದೆಂದು ಶ್ರೀ ಚನ್ನಬಸವಯ್ಯನವರು ಖಂಡಿಸುವ ನಿರ್ಣಯವೊಂದನ್ನು ಸಭೆಯ ಮುಂದೆ ಇಟ್ಟರು. ಇದರ ಪರವಾಗಿ 11 ಓಟುಗಳು ಬಂದವು. ವಿರೋಧ ಓಟುಗಳೇನೂ ಬರಲಿಲ್ಲ.

ಹಿಂದೀ ರಾಷ್ಟ್ರಭಾಷೆಯಾಗಬೇಕೆಂದು ನಿನ್ನೆಯ ದಿವಸ ಶ್ರೀ ರಾಮಚಂದ್ರರಾವ್ ಜಾಂಭೋರೆಯವರ ಅಧ್ಯಕ್ಷತೆಯಲ್ಲಿ ನಡೆದ ಹಿಂದೀ ಸ್ವಯಮಾಣ ಪತ್ರಿಕಾ ವಿತರಣೋತ್ಸವ ಸಂದರ್ಭದಲ್ಲಿ ಶ್ರೀಮತಿ ಲೋಕಸುಂದರಿ ರಾಮನವರು ಭಾಷಣ ಮಾಡಿದರು.

ನಿನ್ನೆಯ ದಿವಸ ಸಂಜೆ ಸುಬ್ಬರಾಯನ ಕರೆಯಲ್ಲಿ ಚಿನ್ನದ ಗಣಿ ಕೂಲಿಕಾರ ದಿನಾಚರಣೆಯನ್ನೇರ್ಪಡಿಸಲಾಗಿತ್ತು.

ಯಾಕೂಬ್ ಎಂಬ ಜಟಕಾ ಗಾಡಿಯವನು ಹೆಣ್ಣು ಬಾಡಿಗೆ ಕೇಳಿದನೆಂದು ರೂ. 5 ಜುಲ್ಮಾನೆ ವಿಧಿಸಲಾಯಿತು.

ಡಾ || ಟಿ ಸಿ ಎಂ ರಿಚೆಯೆನ್ನರು ನಿನ್ನೆಯ ದಿವಸ ಬೆಳಿಗ್ಗೆ ಶ್ರೀಮನ್ಮಹಾರಾಜರ ಭಾವಚಿತ್ರ ಅನಾವರಣೋತ್ಸವವನ್ನು ಶ್ರೀ ವಿಠಲರಾಯರ ಶ್ರೀರಾಮಮಂದಿರದಲ್ಲಿ ತಮ್ಮ ಅನ್ಯೂನ ಹಸ್ತದಿಂದ ನೆರವೇರಿಸಿದರು.

ಕರ್ನಾಟಕ ಪ್ರಾಂತೀಯ ಕಾಂಗ್ರೇಸ್ ಪ್ರತಿನಿಧಿಗಳ ಜುನಾವಣೆಗೆ ಮೈಸೂರು ಪರವಾಗಿ ಶ್ರೀ ಕೆ. ಸುಬ್ಬಣ್ಣನವರು ಸ್ಪರ್ಧಿಸುವುದಾಗಿ ತಿಳಿಯಬಂದಿದೆ.

ಅಂತರ

ಪ್ರಪಂಚವು ಮತ್ತೊಂದು ಮಹಾ ಸಂಗ್ರಾಮದ ಕಡೆಗೆ ಪ್ರಯಾಣ ಮಾಡುತ್ತಿದೆ. ಈ ಪ್ರಯಾಣದ ವೇಗ ಸಮ್ಮ ನಮ್ಮ ಕಣ್ಣಿಗೆ ಕಾಣಬರದಂಥಾದ್ದು; ಊಹೆಗೆ ಎಟಾರದ್ದು; ವಾಯುವೇಗ ಮನೋವೇಗಗಳಾಗಿವೆ! ಅಟಂ ಬಾಂಬು ರಹಸ್ಯವನ್ನು ಮಿತ್ರರಾಜ್ಯಗಳವರು ತಮ್ಮಲ್ಲಿಯೇ ಇಟ್ಟುಕೊಂಡಿರಲು ಯತ್ನಿಸಿದರೂ, ಯಾರೋ ಒಬ್ಬನು (ರಷ್ಯರೇ ಇರಬಹುದು) ತನ್ನ ಗೂಢಚಾರರ ಮುಖಾಂತರ ವಿಷಯವನ್ನು ಅರಿತುಕೊಂಡಿರುವರಂತೆ, ಈ ವಿಷಯದಲ್ಲಿ ತೀವ್ರವಾಗಿ ವಿಚಾರಣೆಗಳು ನಡೆಯುತ್ತಿವೆ.

ಇದು ಹೀಗಿರುವಾಗ ಪ್ರಪಂಚವನ್ನೆಲ್ಲಾ ಒಂದು ಮಹಾ ಕ್ಷಾಮವು ಬಿಗಿದುಕೊಂಡು ಕೂತಿದೆ 100 ಕೋಟಿ ಮಂದಿಗೆ ಈ ವರ್ಷ ಆಹಾರದ ಕೊರತೆ ಏರ್ಪಟ್ಟಿರುವುದೆಂದೂ, ಅದಕ್ಕಾಗಿ ಕೆಂಪು ಯ ಪಕ್ಷ 50 ಲಕ್ಷ ಟನ್‌ಗಳ ಅಕ್ಕಿಯ ಆವಶ್ಯಕವೆಂದೂ ಪ್ರಪಂಚ ಭದ್ರತಾ ಸಂಘದವರು ಅಂದಾಜು ಹಾಕಿರುವರು. ನಮ್ಮ ಭಾರತ ದೇಶದಲ್ಲಿಯೇ ಈ ವರ್ಷ 70 ಲಕ್ಷ ಟನ್‌ಗಳ ಆಹಾರ ಪದಾರ್ಥ ಕೊರತೆ ಇರುವುದಂತೆ.

ಇಂಡೋನೇಷಿಯಾ ಹೋರಾಟವು ಸ್ವಲ್ಪ ಶಗ್ಗಿದೆ. ಡಚ್ಚರು ಕೆಲವು ಅನುಕೂಲಗಳನ್ನು ಕಲ್ಪಿಸುವದಾಗಿ ಹೇಳುತ್ತಿರುವರು. ತೀವ್ರವಾದಿಗಳು ಸಂಪೂರ್ಣ ಸ್ವರಾಜ್ಯವೇ ಬೇಕೆನ್ನುತ್ತಿರುವರು. ಇದಕ್ಕಾಗಿ ಆಂದೋಳನ ಮಾಡುತ್ತಿರುವ ಡಚ್ಚರಿಗೆ ತಮ್ಮ ಹಿಡಿತವನ್ನು ಬಿಡಿಸೋ ಇಷ್ಟವಿಲ್ಲ.

ಪಶ್ಯಾವು ರಷ್ಯಾದೊಂದಿಗೆ ರಾಯಭಾರ ನಡೆಸುತ್ತಿದೆ. ಫಲವೇನಾಗುವುದೋ ಮುಂದೆ ನೋಡಬೇಕು.

ಚೀನಾಕ್ಕೆ ಸೇರಿದ ಮಂಚೂರಿಯದಲ್ಲಿ ಪುನಃ ಗಲಭೆಗಳು ಆಗುತ್ತಿವೆ. ಚೀನಾದಲ್ಲಿ ಅಮೇರಿಕನ್ನರು ಇರುವವರೆಗೂ, ರಷ್ಯನ್ನರು ಮಂಚೂರಿಯವನ್ನು ಬಿಟ್ಟು ಹೋಗಲು ಒಪ್ಪಲಾರರು. ಮುಂದೆ ಏನಾಗುವುದೋ ನೋಡಬೇಕು!

Specific for Asthama

The world renowned remedy for Asthama 'Lachhmana Buti' cures Asthama radically by one single dose taken on full-moon (17-3-46)

Correspondence in English please.

Sebak Sree Janki Sewasharam, Chitrakot (U.P.)

ಅಹಿಂಸೆಯ ಪವಾಡ

ನಮ್ಮ ಜಿಲ್ಲೆಯಲ್ಲಿ ಕೆಲವು ದಿನಗಳಿಂದ ಸಂಚರಿಸುತ್ತಿರುವ ಆಚಾರ್ಯ ಶ್ರೀ 108 ಚಂಬೂಸಾಗರದ ದಿಗಂಬರ ಜೈನ ಮುನಿ ಸಂಘದವರು ಜೈನ ಕ್ಷೇತ್ರಗಳನ್ನು ಧರ್ಮ ಪ್ರಭಾವನೆಯ ಉದ್ದಿಶ್ಯ ಪ್ರವಾಸ ಮಾಡುತ್ತಿರುವ ವೇಳೆಯಲ್ಲಿ ಉಪ್ಪಿನಂಗಡಿಯ ಸಮೀಪ ಹೆಂಜ್ಜ ಎಂಬ ಸ್ಥಳದಲ್ಲಿ ಒಸಪ್ಪಕ್ಕೋಡಿ ಎಂಬಲ್ಲಿಯ ಒಬ್ಬ ಮುಸಲಿಮ ವ್ಯಕ್ತಿಯು ಮುನಿಗಳನ್ನೂ ಅವರೊಡನಿದ್ದ ಇತರ ಪರಿವಾರದವರನ್ನೂ ಅತ್ಯಂತ ಹೀನ ರೀತಿಯಲ್ಲಿ ಮಾತನಾಡಿಸಿದ. ಆಗ ಪರಿವಾರದವರು ಆ ವ್ಯಕ್ತಿಯನ್ನು ಪ್ರತಿಭಟಿಸುವ ಆಲೋಚನೆಮಾಡಲು ಮುನಿಗಳು ಅವನ್ನು ಸಾಧಾನ ಪಡಿಸಿ ಮುಂದುವರಿದರು. ಆ ವ್ಯಕ್ತಿಯ ಅವಹೇಳನಪ್ರಸಂಗವಾಗ ಮುನಿಗಳ ದಿಗಂಬರತ್ವದ ಕಾರಣವಾಗಿತ್ತು. ಆದರೆ ಅಂದೇ ಸಾಯಂಕಾಲದಿಂದ ಆ ವ್ಯಕ್ತಿಯು ಜ್ವರದಿಂದ ಪೀಡಿತನಾಗಿ ವಿಚಿತ್ರರೀತಿಯ ಕಾಯಿಲೆಯಿಂದ ನರಳತೊಡಗಿ ಕೇವಲ ಏಳು ದಿನಗಳಲ್ಲಿ ಮೃತಪಟ್ಟನು. ಆ ಮೇಲೆ ಪುನಃ ಅವನ ತಮ್ಮನಿಗೂ ಅದೇ ಖಾಯಿಲೆಯು ಶುರುವಾಗಿದೆಯೆಂದು ಸುದ್ದಿ. (ಪುತ್ತೂರಿನ ವಾರ್ತೆ)

ನ. ಭಾ.

Edited, Printed and published by M. S. Krishna Rao, at the Jaivavadi Press, Chamaraja Agrahar, Mysore

ಹಸಕ ಬಿಟ್ಟಿದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವೆಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು

At Opera —
3 ನೇ ವಾರ
ಪರಂಜ್ಯೋತಿ
ಏ. ಎ. ಚೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ
ಬಾಲ ಸುಬ್ರಹ್ಮಣ್ಯಂ ಜಯಗೌರಿ
ಕೃಷ್ಣ ಮಧುರಂ ಪಾತ್ರಧಾರಿಗಳು
ಮುಂದಿನ ವಿನೋದ
ಸುರೇಂದ್ರ, ಮೇಹತಾಬ್
ಪಾತ್ರವಹಿಸಿರುವ
ವಿಶ್ವಾಸ್

At Ranjit
From 1-3-46
Vijay Laxmi
ಶೋಭನಸಮರ್ಥ
ಮೋತಿಲಾಲ್
ಮುಂತಾದವರು ಪಾತ್ರವಹಿಸಿರುವ
ವಿಜಯಲಕ್ಷ್ಮಿ

ಅಲ್ಪ ವ್ಯಯದ ಕಾಯಕಲ್ಪ
ಶಕ್ತಿಸುಧಾ
ರಕ್ತವೃದ್ಧಿಗೆ — ಧಾತುಪುಷ್ಟಿಗೆ
ಸಂಜೀವನ
ಬೆಲೆ ಡಬ್ಬಿ ೧ ಕ್ಕೆ ರೂ. ೧.೮-೦
ವಿಳಾಸ—ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

ನುಖ ಆರೋಗ್ಯ ಆನಂದದಾಯಕ
ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.
ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ. ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸೇರು ವ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.
ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.
ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —
ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಉಡುಪುಗಳನ್ನು ಅತಿ ಬೊಕ್ಕಟಿವಾಗಿ ಒಗೆದು
— ಶುಭ್ರಮಾಡುವ ಸಾಧಕ —
ನೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು
ಸಾಬೂನು
ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.